ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಸಂಖ್ಯೆ: DOF-TECHOALL1/162/2023, E-1058232.** **ದಿನಾಂಕ: 24/05/2023**

ಸುತ್ತೋಲೆ

ವಿಷಯ: ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2023-24ನೇ ಸಾಲಿನಿಂದ ವಿಲೇವಾರಿ ಮಾಡುವ ಕುರಿತು.

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ, 2023-24ನೇ ಸಾಲಿನ ಮೀನುಗಾರಿಕೆ ಫಸಲಿ ವರ್ಷದ ನವೀಕರಣದ ದಿನಾಂಕವನ್ನು 31-05-2023ವರೆಗೆ ವಿಸ್ತರಿಸಲಾಗಿತ್ತು. ದಿನಾಂಕ:31/05/2023ರ ಅಂತ್ಯಕ್ಕೆ ಗುತ್ತಿಗೆ/ಬಿಡ್ ಮೊತ್ತ ಪಾವತಿಸಿ ನವೀಕರಿಸಿಕೊಳ್ಳದ ಹಾಗೂ 2022-23 ನೇ ಸಾಲಿಗೆ ಗುತ್ತಿಗೆ ಅವಧಿ ಅಂತ್ಯಗೊಂಡ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2023-24ನೇ ಸಾಲಿನಿಂದ ಅನ್ವಯವಾಗುವಂತೆ ಒಳನಾಡು ಜಲಸಂಪನ್ಮೂಲಗಳ ಗುತ್ತಿಗೆ ಕಾರ್ಯನೀತಿ-2014 ರಂತೆ ಅನುಬಂಧದಲ್ಲಿ ನೀಡಲಾದ ಪರಿಷ್ಕೃತ ವೇಳಾಪಟ್ಟಿಯಂತೆ ವಿಲೇಗೊಳಿಸಲು ಸೂಚಿಸಲಾಗಿದೆ. ಈ ಪರಿಷ್ಕೃತ ವೇಳಾಪಟ್ಟಿಯು 2023-24ನೇ ಸಾಲಿಗೆ ಮಾತ್ರ ಅನ್ವಯವಾಗುತ್ತದೆ.

ಅಡಕ: ಪರಿಷ್ಕೃತ ವೇಳಾಪಟ್ಟಿ

ಸಹಿ/-

ಮೀನುಗಾರಿಕೆ ನಿರ್ದೇಶಕರು

ಗೆ.

ಎಲ್ಲಾ ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರು

ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ

ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ

ಪ್ರತಿಯನ್ನು: ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು,) ಜಲಾಶಯ ಉಸ್ತುವಾರಿ ಅಧಿಕಾರಿಗಳು
ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ(1) ಮತ್ತು (2)ಸಂಗ್ರಹ ಕಡತಕ್ಕೆ.

ಮೀನುಗಾರಿಕೆ ನಿರ್ದೇಶಕರ ಪರವಾಗಿ

25/5/23

ಅನುಬಂಧ

ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2023-24ನೇ ಸಾಲಿನಿಂದ ಅನ್ವಯವಾಗುವಂತೆ ಒಳನಾಡು ಜಲಸಂಪನ್ಮೂಲಗಳ ಗುತ್ತಿಗೆ ಕಾರ್ಯನೀತಿ-2014 ರಂತೆ ವಿಲೇವಾರಿ ಮಾಡಲು ಪರಿಷ್ಕೃತ ವೇಳಾಪಟ್ಟಿ (ಪರಿಷ್ಕೃತ ವೇಳಾಪಟ್ಟಿ ಪ್ರಸಕ್ತ ಸಾಲಿಗೆ ಮಾತ್ರ ಅನ್ವಯ)

| ಕ್ರಮ ಸಂಖ್ಯೆ. | ಮೀನು ಪಾಶುವಾರು ಹಕ್ಕಿನ ವಿಲೇ ಪ್ರಕ್ರಿಯೆ | ಪ್ರಾರಂಭದ ದಿನಾಂಕ | ಮುಕ್ತಾಯಗೊಳಿಸಬೇಕಾದ ಅಂತಿಮ ದಿನಾಂಕ |
|---|---|---|---|
| 1. | ಅ) 2023-24ನೇ ಸಾಲಿಗೆ ಅರ್ಹವಿರುವ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ನವೀಕರಣ | -- | 31-05-2023 |
| | ಆ) ಅರ್ಹ ಮೀನುಗಾರರ ಸಹಕಾರ ಸಂಘ/FPOs ಗಳಿಂದ ಅರ್ಜಿ ಆಹ್ವಾನಿಸಿ ನಿಗದಿತ ನಮೂನೆಯಲ್ಲಿ ಪ್ರಕಟಣೆ ಹೊರಡಿಸುವುದು. | 01-06-2023 | 30-06-2023 |
| | ಇ) ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | -- | 21-06-2023 |
| | ಈ) ಪೂರ್ಣ ಮಾಹಿತಿಗಳೊಂದಿಗೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಕಾರ್ಯನೀತಿ ಅನುಬಂಧ-18 ರಂತೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ | -- | 30-06-2023 |
| 2. | ಕಂಡಿಕೆ 01 ರಂತೆ ನೇರಗುತ್ತಿಗೆ ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ಪ್ರಥಮ (1ನೇ) ಸುತ್ತಿನ ಇ-ಟೆಂಡರ್ ಮೂಲಕ ವಿಲೇ | 24-06-2023 | 31-07-2023 |
| 3. | ಕಂಡಿಕೆ 02 ರಂತೆ ಟೆಂಡರ್-ಕಂ- ಹರಾಜು ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ದ್ವಿತೀಯ (2ನೇ ) ಸುತ್ತಿನ ಇ-ಟೆಂಡರ್ ಮೂಲಕ ವಿಲೇ | 01-08-2023 | 30-09-2023 |
| 4. | ಕಂಡಿಕೆ 03 ರಂತೆ ಇ-ಟೆಂಡರ್ ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ತೃತೀಯ (3ನೇ) ಸುತ್ತಿನ ಟೆಂಡರ್ ಕಂ ಹರಾಜು ಮೂಲಕ ವಿಲೇ | 01-10-2023 | 30-11-2023 |
| 5. | ಮೇಲ್ಕಂಡ ಕಂಡಿಕೆ 01 ರಿಂದ 04ರವರೆಗೆ ಯಾವ ಪ್ರಕ್ರಿಯೆಯಲ್ಲಿಯೂ ವಿಲೇ ಆಗದ ಜಲಸಂಪನ್ಮೂಲಗಳ ವಿಲೇ ವಿನಾಯ್ತಿ ಪಡೆಯುವ ಅವಧಿ | 01-12-2023 | 31-12-2023 |

ಸಹಿ/-

ಮೀನುಗಾರಿಕೆ ನಿರ್ದೇಶಕರು

ಮೀನುಗಾರಿಕೆ ನಿರ್ದೇಶಕರ ಪರವಾಗಿ